# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಚಾಮರಾಜನಗರ.

**<u>ಸ್ಪೆಷಲ್ ಕೇಸ್ ಸಂಖ್ಯೆ: 40/2020</u>**

**ಚಾಸಾ-8**

**ಫ್ರಾಸಾ-5**

**ದಿನಾಂಕ 30.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿದಾರರ ಹೆಸರು** | : ಅಬ್ದುಲ್ ಜಮೀರ್ |
| **ತಂದೆಯ ಹೆಸರು** | : ಲೇಟ್ ಅಬ್ದುಲ್ ಸಬಾನ್ |
| **ವಯಸ್ಸು** | : **49** ವರ್ಷ |
| **ವೃತ್ತಿ** | : ಕಿರಿಯ ಇಂಜಿನಿಯರ್ |
| **ವಾಸ ಸ್ಥಳ** | : ಜೆ.ಪಿ.ನಗರ, ಬೆಂಗಳೂರು. |

<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :-</u>

ನಾನು 2015 ರಿಂದ 2020 ರವರೆಗೆ ಸತ್ತೆಗಾಲ ಶಾಖೆ, ಕೊಳ್ಳೇಗಾಲದ ಚೆಸ್ಕಾಂನಲ್ಲಿ ಕಿರಿಯ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣಾ ಪತ್ರದ ಸಂಖ್ಯೆ 314/2017, ದಿಃ 28.02.2019 ರನ್ವಯ ಗುರುಸ್ವಾಮಿ/ಆರೋಪಿಯ ಪಂಪ್ ಸೆಟ್ ಮತ್ತು ವಾಸದ ಮನೆಗೆ ಅಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದಿದ್ದಾರೆಯೋ ಇಲ್ಲವೋ ಎಂಬುದರ ಬಗ್ಗೆ ಸ್ಥಳ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ವರದಿ ನೀಡಿ ತನಿಖೆಗೆ ಸಹಕರಿಸಲು ಕೋರಿದ್ದು, ಅದಕ್ಕೆ ಅನುಗುಣವಾಗಿ ದಿಃ 08.03.2019 ರಂದು ಮೇಲಿನ ಪತ್ರದನ್ವಯ ಚೆಕ್ಕುಬಂದಿಯ ಪ್ರಕಾರ ಸ್ಥಳ ಪರಿಶೀಲನೆ ಮಾಡಿದಾಗ ಸ್ಥಾವರ ಸಂಖ್ಯೆ SYIP-285 ರಾಮರ್ ರವರ

ಹೆಸರಿನಲ್ಲಿರುವುದು ಕಂಡು ಬಂದಿರುತ್ತದೆ. ಇವರು ದಿಃ 21.09.1998 ರಂದು ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ ಹಾಗೂ ಗುರುಸ್ವಾಮಿಯ ಅಣ್ಣನಾದ ರಾಮರ್ ರವರ ಹೆಸರಿನಲ್ಲಿರುವುದು ಕಂಡು ಬಂದಿರುತ್ತದೆ ಹಾಗೂ ವಾಸದ ಮನೆಗೆ ಸ್ಥಾವರ ಸಂಖ್ಯೆ CPDL-626 ಸ್ಥಾವರವು ಗುರುಸ್ವಾಮಿ/ಆರೋಪಿ ಟಿ.ಜಿ.ದೊಡ್ಡಿ ರವರ ಹೆಸರಿನಲ್ಲಿದ್ದು ಅವರು ದಿಃ 16.12.2009 ರಂದು ವಿದ್ಯುತ್ ಸಂಪರ್ಕ ಪಡೆದು ಉಪಯೋಗಿಸುತ್ತಿರುವುದು ಕಂಡು ಬಂತು.

ದಿಃ21.02.2019 ರಂದು ರೂ.5,280/- ಗಳನ್ನು ಗುರುಸ್ವಾಮಿ/ಆರೋಪಿ ರವರು ನಿಗಮಕ್ಕೆ ಪಾವತಿಸಿರುತ್ತಾರೆ. ಇದನ್ನು ಪರಿಶೀಲನೆ ಮಾಡಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ರೂ.5,280/ ಗಳನ್ನು ಆರೋಪಿಯು ನಿಗಮಕ್ಕೆ ಪಾವತಿಸಿದ ಬಗ್ಗೆ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು.

**ಪಾಟೀ ಸವಾಲು - ಆರೋಪಿ ಪರ ವಕೀಲರಿಂದ -**

ವಿದ್ಯುತ್ ಸಂಪರ್ಕವನ್ನು ಪಡೆಯಬೇಕಾದರೆ ಸಂಬಂಧಪಟ್ಟ ವ್ಯಕ್ತಿಯಿಂದ ದಾಖಲೆಗಳನ್ನು ಪಡೆಯುತ್ತೇವೆ ಎಂದರೆ ಹೌದು. ಈ ಬಗ್ಗೆ ಪೊಲೀಸ್ ರಿಗೆ ನಾನು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ನಾನು ನೀಡಿದಂತಹ ವರದಿಯಲ್ಲಿ ಸರ್ವೆ ನಂಬರ್ ನಮೂದು ಮಾಡಿಲ್ಲ. ನನ್ನ ವರದಿಯಲ್ಲಿ ವಿದ್ಯುತ್ ಸಂಪರ್ಕ ವಾಸದ ಮನೆಗಾ ಅಥವಾ ಪಂಪ್ ಸೆಟ್ ಗಾ ಎಂದು ಹೇಳಲಿಲ್ಲ. CPDL–626 ಎಲ್ಲಿದೆ ಮತ್ತು ಯಾವ ಸರ್ವೆ ನಂಬರ್ ನಲ್ಲಿದೆ ಎಂದು ಹೇಳಲು ಆಗುವುದಿಲ್ಲ. CPDL-626 ಕ್ಕೆ ಸಂಬಂಧಿಸಿದಂತೆ ಲೆಡ್ಜರ್ ನ್ನು ಪೊಲೀಸ್ ರಿಗೆ ಕೊಟ್ಟಿಲ್ಲ. ಸದರಿ ಲೆಡ್ಜರ್ ನಲ್ಲಿ ಕ್ರಮ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ.

ನಿಪಿ-13 ರಲ್ಲಿ CPDL-626 ನಂಬರ್ ಬಗ್ಗೆ ಕಂಡು ಬರುವುದಿಲ್ಲ. ವಿದ್ಯುತ್ ಬಿಲ ನ್ನು ಯಾರು ಕಟ್ಟಿದ್ದಾರೆ ಎಂದು ಹೇಳಲು ಆಗುವುದಿಲ್ಲ. ನಿಪಿ-12 ಮತ್ತು ನಿಪಿ-13 ದಾಖಲೆಗಳನ್ನು ಪೊಲೀಸ್ ರ ಮಾತನ್ನು ಕೇಳಿ ಸೃಷ್ಠಿ ಮಾಡಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. CPDL-626 ಆರೋಪಿಯ ಹೆಸರಿನಲ್ಲಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ನವರ ಕೋರಿಕೆ ಮೇರೆಗೆ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**